
ಡಾ.ವಿನೋದ ಛೆಬ್ಬಿ

**ಅಪಹಾಸ್ಯದಿಂದ, ವ್ಯಂಗ್ಯದಿಂದ ಮನಸ್ಸು ನೋಯಿಸುವವರು ಮನಃಪೂರ್ತಿ ಪ್ರೀತಿಸಲು ಆಗುವುದಿಲ್ಲ. ಅದು ತೋರಿಕೆಯ ಪ್ರೀತಿಯಷ್ಟೆ.**

# 123: ಇಳಿದಾಂಪತ್ಯದ ಬಯಕೆ-2

ಧೀರೇಂದ್ರ ಹಾಗೂ ಧರಿತ್ರಿ ಅವರ ನಲವತ್ತು ವರ್ಷದ ದಾಂಪತ್ಯದಲ್ಲಿ ಗಂಡ ತನ್ನ ವಿವಾಹಪೂರ್ವ ಪ್ರೇಮಪ್ರಕರಣದ ವಿವರಗಳನ್ನು ಹೆಂಡತಿಗೆ ಹೇಳಿಕೊಳ್ಳುತ್ತಿಲ್ಲ ಎಂಬ ಕಾರಣದಿಂದ ವಿರಸವಿದೆ.

ಮದುವೆಗೆ ಮುಂಚಿನ ಸಂಗತಿಗೆ ಧರಿತ್ರಿ ಯಾಕಿಷ್ಟು ಮಹತ್ವ ಕೊಡುತ್ತಿದ್ದಾರೆ ಎಂದು ಅರಿಯಲು ಹೊರಡುವ ಮುಂಚೆ ಅವರಿಬ್ಬರ ಕೌಟುಂಬಿಕ ಹಿನ್ನೆಲೆಯ ವಿವರಗಳನ್ನು ತಿಳಿದುಕೊಳ್ಳಲು ಬಯಸಿದೆ. ಅಷ್ಟರಲ್ಲೇ ಧರಿತ್ರಿ ತಾವೊಬ್ಬರೇ ಮಾತಾಡಬೇಕೆಂದು ಬಯಸಿದರು. ಪ್ರೊ.ಧೀರೇಂದ್ರ ಹೊರಗೆ ನಡೆದರು.

ಧರಿತ್ರಿ ಕೆಳಮಧ್ಯಮ ವರ್ಗದ ದೊಡ್ಡ ಕುಟುಂಬದಿಂದ ಬಂದಿದ್ದಾರೆ. ಐವರು ಹೆಣ್ಣುಮಕ್ಕಳಲ್ಲಿ ಕೊನೆಯವಳಾದುದರಿಂದ ಬಾಲಕಿ ಆಟಕ್ಕುಂಟು, ಲೆಕ್ಕಕ್ಕಿಲ್ಲ ಎಂದು ಬೆಳೆದಿದ್ದಾಳೆ. ಅಕ್ಕಂದಿರು ಬಳಸಿ ಬಿಟ್ಟುಕೊಟ್ಟ ಬಟ್ಟೆಗಳು ತಂಗಿಯದಾಗಿವೆ. ತನ್ನದೆನ್ನುವ ಖಾಸಗಿತನ ಇಲ್ಲದೆ ಪ್ರತ್ಯೇಕತೆಯನ್ನು ಬೆಳೆಸಿಕೊಳ್ಳಲು ಸಾಧ್ಯವಾಗದಿರುವಾಗ ಏನು ಮಾಡಿದಳು? ಕೌಟುಂಬದ ಕೆಲವು ಮೌಲ್ಯಗಳನ್ನು ತನ್ನದಾಗಿಸಿಕೊಂಡು ಬೆಳೆದಳು. ನಿಸ್ವಾರ್ಥತೆ, ಪ್ರಾಮಾಣಿಕತೆ ಹಾಗೂ ಪಾರದರ್ಶಕತೆಗಳು ಆಕೆಯದಾದವು. ಈ ಮೌಲ್ಯಗಳನ್ನು ಇಟ್ಟುಕೊಂಡು ದಾಂಪತ್ಯ ಕಟ್ಟಿಕೊಳ್ಳುವ ಹುಮ್ಮಸ್ಸಿನಿಂದ ಕೊಲ್ಕತ್ತಾಕ್ಕೆ ಹೋದಳು. ಆದರೆ ಅಲ್ಲಿ ಕಂಡಿದ್ದೇ ಬೇರೆ. ನೆರೆಹೊರೆಯವರಲ್ಲದೆ ಮನೆಯವರೂ ಹೆಚ್ಚಿನಂಶ ಬಂಗಾಲಿಯಲ್ಲಿ ಮಾತಾಡುತ್ತಿದ್ದಾರೆ. ಆದರೆ ಧರಿತ್ರಿಗೆ ಹಿಂದೀ ಬಿಟ್ಟು ಬೇರೆ ಭಾಷೆ ಗೊತ್ತಿಲ್ಲ! ಅರ್ಥವಾಗದೆ ಕಣ್ಣುಕಣ್ಣು ಬಿಡುತ್ತಿರುವಾಗ ಆಕೆಯ ಗಲಿಬಿಲಿಯನ್ನು ಕಂಡು ಎಲ್ಲರೂ ನಕ್ಕರೇ ವಿನಾ ಹಿಂದೀಯಲ್ಲಿ ವಿವರಿಸುವ ಪ್ರಯತ್ನ ಮಾಡುತ್ತಿರಲಿಲ್ಲ. ಅವರೆಲ್ಲರ ಅಪಾರದರ್ಶಕ ನಡವಳಿಕೆಯಿಂದ ಧರಿತ್ರಿಯ ಆತ್ಮವಿಶ್ವಾಸ ಕುಗ್ಗಿದ್ದು ಎಷ್ಟು ಸಲವೋ. ಕೆಲವೊಮ್ಮೆ ಇವಳ ಮೇಲೆ ಭಾಷೆಯ ದಾಳಿ ನೇರವಾಗಿಯೇ ನಡೆಯುತ್ತಿತ್ತು. ಉದಾಹರಣೆಗಾಗಿ, ಒಮ್ಮೆ ಬ್ಯಾಂಕಿಗೆ ಹೋದಾಗ ಅಲ್ಲಿಯ ಸಿಬ್ಬಂದಿ ಇವಳಿಗೆ ಬಂಗಾಲಿಯಲ್ಲಿ ಬರೆದ ಕಾಗದವನ್ನು ಕೊಡುತ್ತ ಅದೇನನ್ನೋ ಸೂಚಿಸಿದಾಗ ತಳಬುಡ ಅರ್ಥವಾಗದೆ ಗಂಡನನ್ನು ನೋಡಿದಳು. ಆಗ ಅವನೇನು ಮಾಡಿದ? 'ಇವಳು ಹೆಬ್ಬೆಟ್ಟು ಒತ್ತುವವಳು' ಎಂದು ಸಿಬ್ಬಂದಿಗೆ ಹೇಳಿದ್ದಲ್ಲದೆ ಇವಳತ್ತ ಹೆಬ್ಬೆರಳು ತೋರಿಸಿ ನಕ್ಕ. ನಂತರವೂ ಆತ ಆಕೆಯನ್ನ 'ಅಂಗೂಠಾ ಛಾಪ್' ಎಂದು ಹೆಸರಿಟ್ಟು ಕರೆಯಲಾರಂಭಿಸಿದ. ಅವನ ಅಪ್ರಾಮಾಣಿಕ ನಡವಳಿಕೆಗೆ ಅವಳ ಮನನೊಂದಿತು. ತಾನು ಹಿಂದೀಯಲ್ಲಿ ಪಿಯುಸಿ ಓದಿಲ್ಲವೆ ಎಂದು ವಾದಿಸಿದ್ದು ಅವನ ತಲೆಗೇ ಹೋಗಲಿಲ್ಲ. ಪರಿಣಾಮವಾಗಿ ಅವಹೇಳನದ ವಿರುದ್ಧ ಆಕೆ ಛಲ ತೊಟ್ಟಳು. ಮುಂದೆ ಬಂಗಾಲಿ ಭಾಷೆಯನ್ನು ಕಲಿತು ಅದರಲ್ಲೇ ಪದವಿ ಪಡೆದದ್ದು ಆಕೆಯ ಸಾಹಸಗಾಥೆ.

ಇನ್ನು, ಗಂಡಹೆಂಡಿರ ಬಾಂಧವ್ಯ ಹೊಸದರಲ್ಲಿ ಹೇಗಿತ್ತು? ಮದುವೆಗೆ ಮುಂಚೆ ಗಂಡ ಅವಳನ್ನು ಚಿತ್ರಗೀತೆಗಳಿಂದ ಆರಾಧಿಸಿದವನು ಮದುವೆಯ ನಂತರ ಆಗಾಗ ಕೊಂಕುನುಡಿಗಳಿಂದ ಚುಚ್ಚುತ್ತಿದ್ದ. ಅವಳು ದುಃಖಪಟ್ಟಾಗ ಸರಿ, ಇನ್ನು ಮುಂದೆ ಮಾಡುವುದಿಲ್ಲ ಎಂದು ಪೂಸಿ ಮಾಡುತ್ತಿದ್ದ. ಆದರೂ ಅವಮಾನ ಸೂಕ್ಷ್ಮ ರೀತಿಯಲ್ಲಿ ಮುಂದುವರಿಯುತ್ತಲೇ ಇತ್ತು. ಕೆರಳಿ ಪ್ರತಿಭಟಿಸಿದಾಗ ಆತ ಆಕೆಯನ್ನು ತಬ್ಬಿಕೊಳ್ಳುತ್ತ ನಿನ್ನನ್ನು ತುಂಬಾ ಪ್ರೀತಿಸುತ್ತೇನಲ್ಲವೆ ಎಂದು ಭರವಸೆ ಕೊಡುತ್ತಿದ್ದ.

ಇಷ್ಟುಹೇಳಿ ಧರಿತ್ರಿ ಕೇಳಿದರು: 'ಒಂದು ಕಡೆ ಚುಚ್ಚುತ್ತಿದ್ದರು, ಇನ್ನೊಂದು ಕಡೆ ಸಮಾಧಾನ ಮಾಡುತ್ತಿದ್ದರು. ಇದು ಪ್ರೀತಿಯ ಲಕ್ಷಣವೆ? ನೀವೇ ಹೇಳಿ'.

ಈ ಸಂದರ್ಭದಲ್ಲಿ ನನಗೆ ಇನ್ನೊಂದು ದಾಂಪತ್ಯ ನೆನಪಿಗೆ ಬರುತ್ತದೆ. ಕಲಹವಾಡುವ ಯುವದಂಪತಿ ನನ್ನಲ್ಲಿ ಬಂದಿದ್ದರು. ಗಂಡ ನನ್ನೆದುರೇ ಹೆಂಡತಿಯ ಚಿಕ್ಕ ದೋಷವೊಂದನ್ನು ಹೇಳಿಕೊಂಡು ನಕ್ಕ. ಆಕೆ ಏನೂ ಹೇಳಲಾಗದೆ ಕಣ್ಣತುಂಬ ನೀರು ತುಂಬಿಕೊಂಡು ಮುಖ ತಿರುಗಿಸಿಕೊಂಡಳು. ನಾನು ಗಂಡನಿಗೆ ಅದನ್ನು ತೋರಿಸಿ, ನಿಮಗೇನು ಅನ್ನಿಸುತ್ತದೆ ಅಂದಾಗ ಅವನ ಉತ್ತರ: 'ನನ್ನ ಚಿಕ್ಕ ಹಾಸ್ಯಕ್ಕೂ ಇವಳು ಅಳುತ್ತಾಳಲ್ಲ, ನನ್ನ ಪ್ರೀತಿಗೆ ಏನು ಬೆಲೆ ಕೊಟ್ಟಹಾಗಾಯಿತು, ನೀವೇ ಹೇಳಿ?' ತಾನು ಆಕೆಯನ್ನು ಮನಸಾರೆ ಪ್ರೀತಿಸುತ್ತೇನೆ, ಅದಕ್ಕಾಗಿ ಆಕೆ ತನ್ನ (ಅಪ)ಹಾಸ್ಯವನ್ನು ಸಹಿಸಿಕೊಳ್ಳಬೇಕು ಎಂದು ಅವನ ವಾದ. ಅದನ್ನು ತಡೆಯದೆ ಆಕೆ ಥಟ್ಟನೆ ಎದ್ದುಹೋದಾಗ ಹುಸಿ ದಿಗ್ಭ್ರಮೆಯಿಂದ, 'ನೋಡಿದಿರಾ, ಮನೆಯಲ್ಲೂ ಹೀಗೆಯೇ ಮಾಡುತ್ತಾಳೆ. ನೀವೇ ಬುದ್ಧಿಹೇಳಿ!' ಎಂದ. ಹಲವು ತಿಂಗಳ ನಂತರ ಆಕೆ ಅವನನ್ನು ಬಿಟ್ಟು ಕಾಯಮ್ಮಾಗಿ ದೂರವಾದುದಕ್ಕೆ ಕಾರಣ ಹುಡುಕುತ್ತ ನನ್ನಲ್ಲಿ ಇನ್ನೊಂದು ಸಲ ಬಂದಿದ್ದಳು.

ಇತರರನ್ನು ತಮಾಷೆಗೆ ಈಡುಮಾಡಿ ಮನಸ್ಸು ನೋಯಿಸುವವರು ಯಾರನ್ನಾಗಲೀ ನಿರ್ವ್ಯಾಜವಾಗಿ ಪ್ರೀತಿಸಲು ಸಾಧ್ಯವಿಲ್ಲ. ಅದು ತೋರಿಕೆಯ ಪ್ರೀತಿಯಷ್ಟೆ. ಹೀಗೆ ವರ್ತಿಸುವುದಕ್ಕೆ ಕಾರಣ ವಿಚಿತ್ರವಾಗಿದೆ. ವ್ಯಂಗ್ಯ ಮಾತಾಡುವವರಿಗೆ ಇತರರನ್ನು ಪ್ರೀತಿಸುವುದು ಒತ್ತಟ್ಟಿಗಿರಲಿ, ತಮ್ಮನ್ನೇ ತಾವು ಪ್ರೀತಿಸಿಕೊಳ್ಳಲು ಆಗುವುದಿಲ್ಲ. ಯಾಕೆಂದರೆ ಇವರ ಬಾಲ್ಯದಲ್ಲಿ 'ನೀನು ಪ್ರೀತಿಗೆ ಅರ್ಹ ವ್ಯಕ್ತಿಯಲ್ಲ!' ಎಂಬ ಸಂದೇಶವನ್ನು ಬಿತ್ತಲಾಗಿದ್ದು ಅದನ್ನು ಅವರು ಬಲವಾಗಿ ನಂಬಿರುತ್ತಾರೆ. ಯಾರಾದರೂ ಅವರನ್ನು ಪ್ರೀತಿಸುತ್ತೇನೆ ಎಂದಾಗ 'ಹೇ, ಇದು ನಾನಲ್ಲ!' ಎನ್ನಿಸಿ ಅತಂತ್ರ ಭಾವನೆ ತರಿಸುತ್ತದೆ. ಇದರಿಂದ ಹೊರಬಂದು ತನ್ನಅನರ್ಹತೆಯನ್ನು ಭದ್ರಪಡಿಸಿಕೊಳ್ಳಬೇಡವೆ? ಅದಕ್ಕಾಗಿಯೇ ವ್ಯಂಗ್ಯವಾಡುತ್ತ ಪ್ರೀತಿಗೆ ಅಯೋಗ್ಯನೆಂದು ತೋರಿಸಿಕೊಳ್ಳುತ್ತಾರೆ.

ಪತಿಯ ವ್ಯಂಗ್ಯಕ್ಕೆ ಧರಿತ್ರಿಯ ಪ್ರತಿಕ್ರಿಯೆ ಏನು? ಮೊದಮೊದಲು ದುಃಖಿಸುತ್ತಿದ್ದವರು ನಂತರ ತಿರುಗೇಟು ಕೊಡಲು ಶುರುಮಾಡಿದರು. ಆಗ ಗಂಡ ಹಿಂತೆಗೆಯಲೇಬೇಕಾಯಿತು. ಈಗ ವ್ಯಂಗ್ಯ ಮಾಯವಾಗಿ, ಅದರ ಜಾಗವನ್ನು ಗಂಡನ ಹಳೆಯ ಪ್ರೇಮಪ್ರಕರಣದ ಪ್ರಶ್ನೆಗಳು ಆಕ್ರಮಿಸಿಕೊಂಡಿವೆ. ಹಾಗಾಗಿ ಹೆಂಡತಿ ಗಂಡನ ಬೆನ್ನುಹತ್ತಿದರೆ, ಗಂಡ ತಪ್ಪಿಸಿಕೊಳ್ಳುತ್ತಿದ್ದಾರೆ.

ಇನ್ನು, ಅವರಿಬ್ಬರ ಕಾಮಜೀವನ ಹೇಗಿದೆ? ಅದು ಮಾತ್ರ ಮೊದಲಿನಿಂದಲೂ ಚೆನ್ನಾಗಿದೆ. ಅದರಲ್ಲೂ ತೀರ ಖಾಸಗಿಯಾದ ಒಂದು ವಿಷಯವನ್ನು ಆಕೆ ಹಂಚಿಕೊಂಡರು. ಕಾಮಕೂಟದ ಸಮಯದಲ್ಲಿ ಗಂಡ ತಮಗಿಬ್ಬರಿಗೂ ಪರಿಚಿತಳಾದ ಹೆಣ್ಣೊಬ್ಬಳನ್ನು ನೆನೆಸಿಕೊಳ್ಳುತ್ತಾರೆ. ಆಕೆಯನ್ನು ಅನುಭವಿಸುತ್ತಿದ್ದೇನೆ ಎಂದು ಹೇಳಿಕೊಳ್ಳುತ್ತ ಇವಳೊಡನೆ ಸಂಭೋಗಿಸುತ್ತಾರಂತೆ. ಹೌದೆ, ಆಗ ಆಕೆಗೆ ಏನು ಅನ್ನಿಸುತ್ತದೆ? ಆತ ಹೀಗೆ ಮಾಡುವುದು ತನ್ನ ಶರೀರ ಅನಾಕರ್ಷಕ ಆಗಿದೆ ಎಂದೆನಿಸುತ್ತದೆ ಎಂದು ಹೇಳುತ್ತ ಕಣ್ಣೀರು ತುಂಬಿಕೊಂಡರು. ನೀವು ಅದನ್ನು ನಿಲ್ಲಿಸಲು ಹೇಳಬಹುದಲ್ಲವೆ ಎಂದಾಗ ಆಕೆ ಹೇಳಿದ್ದು ಆಶ್ಚರ್ಯಕರವಾಗಿತ್ತು.

'ನಿಜವಾಗಿಯೂ ಹೇಳಬೇಕೆಂದರೆ, ಆಗ ನನಗೆ ಅತ್ಯಂತ ಹೆಚ್ಚು ಕಾಮತೃಪ್ತಿಯಾಗುತ್ತದೆ!' ಎಂದು ಕಣ್ಣೀರನ್ನು ಸಂತೋಷದೊಂದಿಗೆ ಬೆರೆಸಿ ಹೇಳಿದರು.

ಒಂದುಕಡೆ ಗಂಡನ ಹಳೆಯ ಪ್ರೇಮ ಪ್ರಕರಣವನ್ನು ಕೆದಕುತ್ತಿದ್ದು, ಆತ ಇತರ ಹೆಣ್ಣನ್ನು ಕಾಮಿಸುವಾಗ ಕೀಳರಿಮೆ ಅನುಭವಿಸುತ್ತಿದ್ದಾರೆ. ಇನ್ನೊಂದು ಕಡೆ ಅದರಲ್ಲೇ ಪರಮಸುಖ ಪಡೆಯುತ್ತಿದ್ದಾರೆ!

ಇದರ ಹಿಂದೆ ಏನಿದೆ ಎಂಬುದನ್ನು ಮುಂದಿನ ಸಲ ನೋಡೋಣವಂತೆ.

ಉಚಿತ ಸಹಾಯವಾಣಿಗೆ ಮಂಗಳವಾರ ಹಾಗೂ ಶುಕ್ರವಾರ ಕರೆಮಾಡಿ. ಲೈಂಗಿಕ ಸಮಸ್ಯೆಗಳಿಗೆ: **8050255229** (3ರಿಂದ 5ರ ತನಕ); ದಾಂಪತ್ಯ ಸಮಸ್ಯೆಗಳಿಗೆ: **8494944888** (11ರಿಂದ ಸಂಜೆ 5ರ ತನಕ). ದಾಂಪತ್ಯ ಸಮಸ್ಯೆಗಳ ಪರಿಹಾರಕ್ಕೆ 'ಸುಧಾ'ಕ್ಕೆ ಪತ್ರ ಬರೆಯಬಹುದು.